ನಗರಸಭೆ, ಮನಿಸಿಪಾಲಿಟಿ, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 117(485)

ಸದಸ್ಯರ ಹೆಸರು: ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ.(ಕೋಲಾರ)

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ನಗರಸಭೆ ಪಟ್ಟಣ ಪಂಚಾಯತಿ ಹಾಗೂ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಎಷ್ಟು ದಿವಸಗಳಿಗೆ ಒಮ್ಮೆ ಶುಚಿತ್ವ ಕೆಲಸ ನಿರ್ವಹಿಸಬೇಕೆಂಬ ನಿಯಮವಿದೆ?

ಆ) ಆ ನಿಯಮಗಳ ಪ್ರಕಾರ ಶುಚಿಗೊಳಿಸಲಾಗಿದೆಯೆ?

ಇ) ಶುಚಿಗೊಳಿಸಿದ ನಂತರ ಇರುವ ತ್ಯಾಜ್ಯ ವಸ್ತುಗಳ ಮರು ಬಳಕೆ ಮಾಡುವ ಬಗ್ಗೆ ಏನಾದರೂ ಕ್ರಮ ಜರುಗಿಸಲಾಗಿದೆಯೇ?

ಈ) ರಾಜ್ಯದಲ್ಲಿ ಇದಕ್ಕಾಗಿ ನೀಡುತ್ತಿರುವ ಅನುದಾನವೆಷ್ಟು?

ಉತ್ತರ

ಅ) ಪ್ರತಿನಿತ್ಯ ಶುಚಿತ್ವ ಕೆಲಸ ನಿರ್ವಹಿಸಲು ನಿಯಮ ಇರುತ್ತದೆ. ಆದಾಗ್ಯೂ ಪೌರ ಕಾರ್ಮಿಕರ ಸಂಖ್ಯೆ ಕಡಿಮೆಯಿರುವ ಸ್ಥಳೀಯ ಸಂಸ್ಥೆಗಳಲ್ಲಿ ನೈರ್ಮಲೀಕರಣ: ಕಸ ವಿಲೇವಾರಿಯನ್ನು ಖಾಸಗಿಯವರಿಗೆ ಗುತ್ತಿಗೆಯ ಮೇರೆಗೆ ವಹಿಸಿಕೊಡಲಾಗುತ್ತಿದೆ.

ಆ) ಮತ್ತು ಇ) ನಗರ ಮತ್ತು ಪಟ್ಟಣಗಳು ವಿಸ್ತಾರವಾಗಿ ಬೆಳೆದಿರುವುದರಿಂದ ಮತ್ತು ಪೌರ ಕಾರ್ಮಿಕರ ಸಿಬ್ಬಂದಿ ಕೊರತೆ ಇರುವುದರಿಂದ ಪ್ರತಿನಿತ್ಯ ಸ್ವಚ್ಛತಾ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಈ) ಅವಕಾಶವಿರುವುದಿಲ್ಲ.

ರಾಜಾಜಿನಗರ ಪ್ರದೇಶದ ದ್ವಾರದಿಂದ ಸಿಟಿರೈಲ್ವೆ ನಿಲ್ದಾಣದ ಕಡೆಗೆ ವಾಹನ ದಟ್ಟಣೆ ಹೆಚ್ಚಿರುವುದು.